

# ತಲಸ್ಸೇಮಿಯಾ

## ಶ್ರೀಲಂಕಾ ಮಕ್ಕಳಲ್ಲಿ ಹೊಸ ಹುರುಪು

ತಲಸ್ಸೇಮಿಯಾ ಎಂಬುದು ರಕ್ತ ಸಂಬಂಧಿ ಕಾಯಿಲೆ. ಕೆಂಪು ರಕ್ತಕಣಗಳ ತೀವ್ರ ಕೊರತೆಯಿಂದ ಈ ಕಾಯಿಲೆ ಬರುತ್ತದೆ. ಇದರಿಂದ ಬೆಳವಣಿಗೆ ಕುಂಠಿತವಾಗುತ್ತದೆ. ಇದೊಂದು ಆನುವಂಶೀಯ ಕಾಯಿಲೆ.

■ ಉಮಾ ವೇಣೂರು

ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯಲ್ಲಿ ಶ್ರೀಲಂಕಾದಿಂದ ಬಂದ ನಾಲ್ಕು ಪುಟಾಣಿಗಳು ಕಿಲಕಿಲನೆ ನಗುತ್ತಾ ಪುಟ್ಟ ಪುಟ್ಟ ಹೆಜ್ಜೆ ಇಡುತ್ತಾ ನಲಿದಾಡುತ್ತಿದ್ದವು. ಈ ಮಕ್ಕಳು ಜೀವಕ್ಕೇ ಅಪಾಯವೊದಗುವ ಸಮಸ್ಯೆಯನ್ನು ಎದುರಿಸಿ, ಸಂಪೂರ್ಣವಾಗಿ ಗುಣಮುಖರಾದ ಮಕ್ಕಳು ಎಂದು ಮೇಲ್ನೋಟಕ್ಕೆ ಅನಿಸುತ್ತಲೇ ಇರಲಿಲ್ಲ. ಆರೋಗ್ಯ ಸಮಸ್ಯೆಯ ಆಳಕ್ಕಿಳಿದು ರಕ್ತ ಸಂಬಂಧಿ ತೊಂದರೆಯ ಒಳಹೊರಗನ್ನು ವೈದ್ಯರು ವಿವರಿಸಿದಾಗಲೇ ತಲಸ್ಸೇಮಿಯಾ ಎಂಬ ಮಾರಣಾಂತಿಕ ಕಾಯಿಲೆಯ ಭೀಕರತೆ ಅರಿವಾದದ್ದು.

ಹೌದು, ತಲಸ್ಸೇಮಿಯಾ ಎಂಬುದು ರಕ್ತ ಸಂಬಂಧಿ ಕಾಯಿಲೆ. ಕೆಂಪು ರಕ್ತಕಣಗಳ ತೀವ್ರ ಕೊರತೆಯಿಂದ ಈ ಕಾಯಿಲೆ ಬರುತ್ತದೆ. ಇದರಿಂದ ಬೆಳವಣಿಗೆ ಕುಂಠಿತವಾಗುತ್ತದೆ. ಇದೊಂದು ಆನುವಂಶೀಯ ಕಾಯಿಲೆ. ರೋಗಿಯ ದೇಹದಲ್ಲಿ ಕೆಂಪು ರಕ್ತಕಣಗಳು ಕಡಿಮೆಯಾಗುತ್ತಾ ಹೋಗುತ್ತದೆ. ಕೆಲವು ಮಕ್ಕಳಲ್ಲಿ ಕೆಂಪು ರಕ್ತ ಕಣ ಉತ್ಪತ್ತಿ ಪ್ರಮಾಣವೂ ಬಹಳ ಕಡಿಮೆ ಇರುತ್ತದೆ. ಸೂಕ್ತವಾದ ಚಿಕಿತ್ಸೆ ನೀಡದೇ ಇದ್ದ ಪಕ್ಷದಲ್ಲಿ ಜೀವಕ್ಕೇ ಅಪಾಯ ಬರುವ ಸಾಧ್ಯತೆ ಇದೆ. ಇಂಥ ರೋಗಿಗಳು ದೀರ್ಘಕಾಲದ ರಕ್ತದ ಕಸಿಗೆ ಪ್ರತಿ ಮೂರು ಅಥವಾ ನಾಲ್ಕು ವಾರಗಳಿಗೆ ಒಮ್ಮೆ ಒಳಗೊಳ್ಳಬೇಕು. ಇದನ್ನು ಪುನರಾವರ್ತಿಸಿದಾಗ ಕಬ್ಬಿಣದ ಅಂಶ ರಕ್ತದಲ್ಲಿ ಹೆಚ್ಚಾಗಿ ಹೃದಯ ಮತ್ತು ಯಕೃತ್ತಿನ ಮೇಲೂ ಪರಿಣಾಮ ಬೀರಬಹುದು. ಮಕ್ಕಳು ಅಥವಾ ವಯಸ್ಕರಲ್ಲಿ ತಲಸ್ಸೇಮಿಯಾ ಚಿಕಿತ್ಸೆ ಒಂದು ಸಂಕೀರ್ಣವಾದ ಪ್ರಕ್ರಿಯೆ.

ಕಳೆದ ಕೆಲ ತಿಂಗಳ ಹಿಂದೆ ತಲಸ್ಸೇಮಿಯಾ ಸಮಸ್ಯೆಯಿಂದ ಬಳಲುತ್ತಿದ್ದ ಶ್ರೀಲಂಕಾದ ನಾಲ್ವರು ಮಕ್ಕಳು ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯಲ್ಲಿರುವ ಮಜುಂದಾರ್ ಷಾ ಕ್ಯಾನ್ಸರ್ ಸೆಂಟರ್‌ನಲ್ಲಿನ ಅಸ್ಥಿಮಜ್ಜೆ ಕಸಿ ಘಟಕದಲ್ಲಿ ಚಿಕಿತ್ಸೆಗೊಳಗಾದರು. ಜಗತ್ತಿನ ಬೇರೆ ಬೇರೆ ಕಡೆಗಳಿಂದ ಅಸ್ಥಿಮಜ್ಜೆಯನ್ನು ದಾನಿಗಳಿಂದ ಪಡೆದು ತಲಸ್ಸೇಮಿಯಾ ತೊಂದರೆಯುಳ್ಳ ಮಕ್ಕಳಿಗೆ ಕಸಿ ಮಾಡಲಾಯಿತು. ಇದರಿಂದ ಮಕ್ಕಳು ಸಂಪೂರ್ಣವಾಗಿ ಚೇತರಿಸಿಕೊಂಡು ಲವಲವಿಕೆಯಿಂದ ಓಡಾಡುವಂತಾಗಿದ್ದು, ತಮ್ಮ ದೇಶಕ್ಕೆ ಖುಷಿಯಿಂದ ಮರಳಿ ಹೋಗುವಂತಾಯಿತು.

ತಲಸ್ಸೇಮಿಯಾ ಸಮಸ್ಯೆ ಹೊಂದಿದ್ದ ಸುಮಾರು ಒಂದೂವರೆ ವರ್ಷದ ಮಗು ನೇತುಮಿ ಶೆನಾಯ ರಾಜಪಕ್ಷ ಬಮಲೂವೆ, 4 ವರ್ಷದ ಸುವಿನಿ ಉಮೇದ ಶ್ರೀಮಾಲಿ ಬಾಲಸೂರಿಯಾ, 5 ವರ್ಷ ವಯಸ್ಸಿನ ಪೂರ್ಣ ಮತ್ತು 10 ವರ್ಷ ವಯಸ್ಸಿನ ಮಿಥುನ್ ದಿಲೇಶ್ ಈ ಚಿಕಿತ್ಸೆ ಪಡೆದ ಮಕ್ಕಳು.

ತಲಸ್ಸೇಮಿಯಾ ಸಮಸ್ಯೆಯಿದ್ದವರಿಗೆ ಒಡಹುಟ್ಟಿದವರಿಂದ ಪಡೆದ ಅಸ್ಥಿಮಜ್ಜೆಯನ್ನು ಕಸಿ ಮಾಡಿದಾಗ ಅವರು ಬೇಗನೆ ಗುಣಮುಖರಾಗುತ್ತಾರೆ. ಆದರೆ ಸಂಬಂಧಿಯೇ ಅಲ್ಲದ ದಾನಿಗಳಿಂದ ಪಡೆದ ಅಸ್ಥಿಮಜ್ಜೆಯನ್ನು ಕಸಿ ಮಾಡಲು ಹಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ರಕ್ತದ ಗುಂಪು ಹೊಂದಾಣಿಕೆ ಆಗುವುದರಿಂದ ಹಿಡಿದು ಎಲ್ಲ ರೀತಿಯಿಂದಲೂ ಅಸ್ಥಿಮಜ್ಜೆ ರೋಗಿಗೆ ತಕ್ಕುದಾದವೇ ಎಂಬುದನ್ನು ಆಮೂಲಾಗ್ರವಾಗಿ ಪರೀಕ್ಷೆ ನಡೆಸಿ ನಂತರ ನೀಡಬೇಕಾಗುತ್ತದೆ. ಯಶಸ್ಸಿನ ಪ್ರಮಾಣ ಸಂಬಂಧಿಯಿಂದ ಪಡೆದು ನೀಡಿದ ಅಸ್ಥಿಮಜ್ಜೆಯಿಂದ ಉಂಟಾದ ಪರಿಣಾಮಕ್ಕಿಂತಲೂ ದಾನಿಗಳಿಂದ ಪಡೆದು ಚಿಕಿತ್ಸೆ ನಡೆಸಿದುದರಲ್ಲಿ ಕೊಂಚ ಕಡಿಮೆ ಎಂದೇ ಹೇಳಬಹುದು.

‘ತಲಸ್ಸೇಮಿಯಾ ಎಂಬುದು ವಂಶವಾಹಿ ಆಧಾರಿತ ರಕ್ತದ ತೊಂದರೆಯಾಗಿದ್ದು ಇದರಲ್ಲಿ ದೇಹ ಸೂಕ್ತ ಸಂಖ್ಯೆಯ ಕೆಂಪು ರಕ್ತಕಣಗಳನ್ನು ಉತ್ಪಾದಿಸುವಲ್ಲಿ ವಿಫಲವಾಗುತ್ತದೆ. ಜೊತೆಗೆ ಉತ್ಪಾದನೆಯಾದ ರಕ್ತ ಕಣಗಳು ಕೂಡ ಬೇಗನೇ ನಾಶವಾಗಿ ಹಿಮೋಗ್ಲೋಬಿನ್ ಮಟ್ಟ ಅತ್ಯಂತ ಕಡಿಮೆಯಾಗುತ್ತದೆ. ಈ ರೋಗಿಗಳಿಗೆ ಜೀವನದುದ್ದಕ್ಕೂ ರಕ್ತ ವರ್ಗಾವಣೆಯ ಅಗತ್ಯವಿರುತ್ತದೆ. ಅವರ ಜೀವಿತಾವಧಿ ಕೂಡ ತುಂಬಾ ಕಡಿಮೆ ಇರುತ್ತದೆ. ಸಂಬಂಧಿಗಳಿಂದ ಅಥವಾ ದಾನಿಗಳಿಂದ ಪಡೆದ ಅಸ್ಥಿಮಜ್ಜೆಯನ್ನು ಕಸಿ ಮಾಡಿದರಷ್ಟೇ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಾಣಬಹುದು’ ಎಂದು ವಿವರಿಸುತ್ತಾರೆ ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯಲ್ಲಿನ ಮಕ್ಕಳ ರಕ್ತರೋಗ ಶಾಸ್ತ್ರ ಮತ್ತು ಕ್ಯಾನ್ಸರ್ ರೋಗಶಾಸ್ತ್ರ ತಜ್ಞ ಡಾ. ಸುನಿಲ್ ಭಟ್.

ಲಕ್ಷಣಗಳೇನು?

ಈ ಕಾಯಿಲೆಯ ಲಕ್ಷಣಗಳು ಪತ್ತೆಯಾಗುವುದು ಮಗುವಿಗೆ ಸುಮಾರು ಆರು ತಿಂಗಳು ತುಂಬಿದ ಬಳಿಕವೇ. ತಲಸ್ಸೇಮಿಯಾ ಸಮಸ್ಯೆ ತೀವ್ರ ತರದ್ದಾಗಿದ್ದರೆ ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಇದೆ. ಮಗು ನಿತ್ರಾಣವಾಗಿರುತ್ತದೆ, ಹೆಚ್ಚಿನ ಸಂದರ್ಭಗಳಲ್ಲಿ ಬಿಳಿಚಿಕೊಂಡಿರುತ್ತದೆ. ಆಯಾಸ ಅಥವಾ ಸುಸ್ತು ಹೆಚ್ಚಿರುತ್ತದೆ. ಮಗುವಿಗೆ ಸೋಂಕು ಬೇಗನೆ ತಗುಲುತ್ತದೆ, ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಹಸಿವೆ ಇಲ್ಲದಿರುವುದು, ಬಾಯಾರಿಕೆಯೇ ಆಗದಿರುವುದು, ಕೆಲವೊಮ್ಮೆ ಜಾಂಡೀಸ್ ಕೂಡ ಬರಬಹುದು. ಅಂಗಾಂಗಗಳ ಗಾತ್ರ ಹೆಚ್ಚುತ್ತಾ ಹೋಗುತ್ತದೆ. ಮುಖ್ಯವಾಗಿ ಕೆನ್ನೆ, ಹಣೆ, ದವಡೆಗಳು ಊದುತ್ತವೆ. ತಲಸ್ಸೇಮಿಯಾ ಕಾಯಿಲೆ ಪತ್ತೆಗೆ ರಕ್ತ ಪರೀಕ್ಷೆ ಮಾಡಬೇಕಾಗುತ್ತದೆ. ಮೊದಲಿಗೆ ಅನೀಮಿಯ ಮತ್ತು ಹಿಮೋಗ್ಲೋಬಿನ್ ಪರೀಕ್ಷೆ ಮಾಡಲಾಗುತ್ತದೆ. ರಕ್ತಕಣಗಳ ಗಾತ್ರ, ಆಕಾರವನ್ನು ಪತ್ತೆ ಹಚ್ಚಲಾಗುತ್ತದೆ. ಕೆಂಪು ರಕ್ತಕಣಗಳು ಅಸಹಜ ಗಾತ್ರದಲ್ಲಿದ್ದರೆ ಅದು ತಲಸ್ಸೇಮಿಯಾ ಕಾಯಿಲೆ ಎಂಬುದು ಪತ್ತೆಯಾಗುತ್ತದೆ.

‘ಅಸ್ಥಿಮಜ್ಜೆ ಚಿಕಿತ್ಸೆಗೆ ಸುಮಾರು 10ರಿಂದ 12 ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತದೆ. ಈ ಚಿಕಿತ್ಸೆ ಬಹಳ ದುಬಾರಿಯಾಗಿರುವುದರಿಂದ ಸರ್ಕಾರವೂ ತಲಸ್ಸೇಮಿಯಾ ರೋಗಿ ಇರುವ ಕುಟುಂಬಕ್ಕೆ ಧನಸಹಾಯ ಒದಗಿಸಬೇಕು’ ಎಂದು ಹೇಳುತ್ತಾರೆ ನಾರಾಯಣ ಹೆಲ್ತ್‌ಸಿಟಿಯಲ್ಲಿ ತಜ್ಞ ವೈದ್ಯೆಯಾಗಿರುವ ಡಾ. ಶೋಭಾ ಬಡಿಗೇರ್.

‘ನಮ್ಮ ದೇಶದಲ್ಲಿ ತಲಸ್ಸೇಮಿಯಾ ವಾಸಿಯಾಗದಂತಹ ರೋಗ ಎಂದೇ ಪರಿಗಣಿಸಲಾಗಿದ್ದು ಅರಿವಿನ ಕೊರತೆ ಇದೆ. ಅಸ್ಥಿಮಜ್ಜೆ ದಾನಿಗಳ ಕೊರತೆಯೂ ಇದೆ. ಹೀಗಾಗಿ ತಲಸ್ಸೇಮಿಯಾದಿಂದ ಮೃತಪಡುವ ಮಕ್ಕಳ ಸಂಖ್ಯೆ ಶ್ರೀಲಂಕಾದಲ್ಲಿ ಹೆಚ್ಚು. ದಾನಿಗಳ ದಾಖಲಾತಿ ಕೇಂದ್ರ ಸ್ಥಾಪನೆ ಇಲ್ಲಿ ಅಗತ್ಯವಿದೆ’ ಎಂದು ಹೇಳುತ್ತಾರೆ ಸುವಿನಿ ಉಮೇದ ಶ್ರೀಮಾಲಿ ಬಾಲಸೂರಿಯ ಅವರ ತಂದೆ ಹಾಗೂ ಶ್ರೀಲಂಕಾ ತಲಸ್ಸೇಮಿಯಾ ಸೊಸೈಟಿಯ ಕಾರ್ಯದರ್ಶಿಯಾಗಿರುವ ಜಯಂತ ಬಾಲಸೂರಿಯ. ■